

ಚಿತ್ರ: ಎಂ.ಎಸ್. ಮಂಜುನಾಥ್

ಪೋಷಕರಿಗೆ ಆಗಬಾರದ್ದೇನಾದರು ಆದರೆ, ಫ್ಯಾಮಿಲಿ ಪಿಂಚಣಿ ಬರುತ್ತದೆ. ಅವರ ಮಕ್ಕಳಿಗೆ ನೌಕರಿ ನೀಡುತ್ತದೆ. ಇನ್ನೂ ಏನೇನೋ... !

ನೌಕರಿಯಿಂದ ನಿಮ್ಮ ಪೋಷಕರಿಗಷ್ಟೇ ಅಲ್ಲ, ನಿಮಗೂ ಸಮಾಜದಲ್ಲಿ ಒಂದು ಸ್ಥಾನಮಾನ ಇದೆ, ಮರೆಯಬೇಡಿ. ಹಾಗಿದ್ದಲ್ಲಿ ಎಂದಾದರೂ ನೀವು ನಿಮ್ಮ ಪೋಷಕರನ್ನು ಪ್ರಶ್ನಿಸಿದ್ದೀರಾ? ನಿಮ್ಮ ಸಂಬಳ ಎಷ್ಟು? ನೀವು ಎಲ್ಲಿ ಕೆಲಸ ಮಾಡುತ್ತೀರಿ? ಏನು ಕೆಲಸ ಮಾಡುತ್ತೀರಿ? ಹೇಗೆ ಕೆಲಸ ಮಾಡುತ್ತೀರಿ? ಆಫೀಸಿಗೆ ಸರಿಯಾದ ಸಮಯಕ್ಕೆ ಹೋಗುತ್ತೀರಾ? ನೀವು ನಿಮ್ಮ ಉದ್ಯೋಗ–ವನ್ನು ಸೇವೆ ಎಂದು ಕೆಲಸ ಮಾಡುತ್ತೀರಾ? ಇಲ್ಲವೇ ಹಕ್ಕು, ಅಧಿಕಾರ ಎಂದು ಪರಿಗಣಿಸುತ್ತೀರೋ? ನೀವು ನಿಮ್ಮ ಕೆಲಸ ನಿಯತ್ತಾಗಿ ಮಾಡುತ್ತೀರಾ? ಆಫೀಸಿನಲ್ಲಿ ಸುಮ್ಮನೆ ಕಾಲಹರಣ ಮಾಡಿಕೊಂಡಿರುತ್ತೀರಾ? ನೀವು ನಿಮ್ಮ ಸಹೋದ್ಯೋಗಿಗಳೊಂದಿಗೆ ಸರಿಯಾಗಿ, ಸೌಜನ್ಯವಾಗಿ, ಗೌರವವಾಗಿ ವರ್ತಿಸುತ್ತೀರಾ? ಕಾರ್ಯಾರ್ಥವಾಗಿ ಕಛೇರಿಗೆ ನಿಮ್ಮಲ್ಲಿಗೆ ಬರುವ ಸಾರ್ವಜನಿಕರಿಗೆ ಸರಿಯಾದ ಮಾರ್ಗದರ್ಶನ ನೀಡುತ್ತೀರಾ? ಅವರಿಗೆ ಗೌರವ ಕೊಡುತ್ತೀರಾ? ಅವರ ಕೆಲಸ ಮಾಡಿಕೊಡುತ್ತೀರಾ? ಇಲ್ಲವೇ ಸತಾಯಿಸುತ್ತೀರಾ? ಅಲೆದಾಡಿಸುತ್ತೀರಾ? ಲಂಚ ಪಡೆಯುತ್ತೀರಾ? ಭ್ರಷ್ಟಾಚಾರ ಮಾಡುತ್ತೀರಾ?

ಮನೆಯಲ್ಲಿ ಲೈಟು, ಫ್ಯಾನ್ ಸ್ವಿಚ್ ಆಫ್ ಮಾಡದೆ ಇದ್ದರೆ ನಮ್ಮನ್ನು ಬೈಯುತ್ತೀರಲ್ಲಾ.. ನೀವು ನಿಮ್ಮ ಆಫೀಸಿನಲ್ಲಿ ನಿಮ್ಮ ಸ್ಥಳದಿಂದ ಎದ್ದು ಹೋಗುವಾಗ ಲೈಟು, ಫ್ಯಾನ್ ಸ್ವಿಚ್ ಆಫ್ ಮಾಡುತ್ತೀರಾ? ನೀರಿನ ಕೊಳಾಯಿ ನಿಲ್ಲಿಸುತ್ತೀರಾ? ಸಂಬಳಗಿಂತ ಹೆಚ್ಚು ಹಣ ಮನೆಗೆ ತಂದಾಗ ಇಷ್ಟು ಹಣ ಹೇಗೆ ಬಂತು ಅಂತ ಕೇಳಿದ್ದೀರಾ? ಗಿಫ್ಟು ಅಂತ ಏನಾದರೂ ಬೆಲೆ ಬಾಳುವ ವಸ್ತು ಮನೆಗೆ ತಂದಾಗ, ಯಾರು ಕೊಟ್ಟರು? ಏಕೆ ಕೊಟ್ಟರು ಅಂತ ಕೇಳಿದ್ದೀರಾ?

ನಿಮ್ಮನ್ನು ನೀವೇ ಕೇಳಿಕೊಳ್ಳಿ. ಒಮ್ಮೆಯಾದರೂ ನೀವಾಗಲೀ, ಮನೆಯಲ್ಲಿರುವ ತಾಯಿಯಾಗಲೀ, ನಿಮ್ಮ ತಂದೆಯನ್ನು ಕೇಳಿದ್ದೀರಾ? ಇದು ನಿಮ್ಮ ಆದ್ಯ ಕರ್ತವ್ಯವಲ್ಲವೇ? ಇವು ಅಸಂಬದ್ಧ ಪ್ರಶ್ನೆಗಳಲ್ಲ, ತಲೆಹರಟೆ ಪ್ರಶ್ನೆಗಳಲ್ಲ, ಅಪರಂಜಿ ಪ್ರಶ್ನೆಗಳು. ಹಾಗೆ ಪ್ರಶ್ನೆ ಹಾಕಿದರೆ ನಿಮ್ಮ ಪೋಷಕರಿಗೆ ಅಗೌರವ ಸೂಚಿಸಿದಂತೆ ಎಂಬ ಭಾವನೆಯೇ? ಇಲ್ಲ. ಹಾಗೆ ಪ್ರಶ್ನಿಸದಿದ್ದರೆ ಅಗೌರವ. ಮಕ್ಕಳು ಮಕ್ಕಳು ಎಂದು ಪೋಷಕರಿಂದ ಬುದ್ಧಿವಾದ ಕೇಳಿ ಕೇಳಿ ಬುದ್ದುಗಳಾಗಿದ್ದು ಸಾಕು. ನಿಮ್ಮ ಪೋಷಕರನ್ನು ಪ್ರಶ್ನಿಸುವಷ್ಟು ಪ್ರಬುದ್ಧರಾಗಿ. ನೀವು ನಿಮ್ಮ ಪೋಷಕರನ್ನು ಹೀಗೆ ಪ್ರಶ್ನಿಸುವುದರ ಮೂಲಕ ಸಮಾಜಕ್ಕೆ, ಸರ್ಕಾರಕ್ಕೆ ಒಳ್ಳೆಯ ಕೊಡುಗೆ ನೀಡುತ್ತೀರಿ.

ಮಕ್ಕಳೇ ನಿಮ್ಮ ಪೋಷಕರು ಒಳ್ಳೆಯವರೇ. ನೀತಿ ನಿಯತ್ತಿನಿಂದ ಕೆಲಸ ಮಾಡುವವರೇ. ಆದರೆ ಕೆಲವರು ಪೋಷಕರು, ಕೆಲವೇ ಕೆಲವರ ಪೋಷಕರು ನಿಮ್ಮ ಪೋಷಕರ ಹಾಗಲ್ಲ. ಅವರ ಹಾಗೆ ನಿಮ್ಮ ಪೋಷಕರೂ ದಾರಿ ತಪ್ಪಲು ಬಯಸುತ್ತೀರಾ? ಸರ್ಕಾರದ ಸಾರ್ವಜನಿಕರ ಹಣ ನುಂಗಿ ಭಂಡಾರ ಬರಿದು ಮಾಡುವ, ಕಳಪೆ ಕೆಲಸ ಮಾಡುವ, ಸಾರ್ವಜನಿಕರ ರಕ್ತ ಹೀರುವ ಭ್ರಷ್ಟರಲ್ಲಿ ನಿಮ್ಮ ಪೋಷಕರೂ ಒಬ್ಬರಾಗಲು ಬಯಸುತ್ತೀರಾ? ಹೆಮ್ಮೆಯ ಸಂಸ್ಕಾರವಂತ ಪೋಷಕರ ಮಕ್ಕಳೆನಿಸಿಕೊಳ್ಳಲು ನಿಮಗೆ ಇಷ್ಟವಿಲ್ಲವೇ? ಆ ಹೆಮ್ಮೆ ನಿಮಗೆ ಬೇಡವೇ?

ಪೋಷಕರು ತಮ್ಮ ಮಕ್ಕಳ ಬಗ್ಗೆ ತಿಳಿದುಕೊಳ್ಳುವುದು ಎಷ್ಟು ಮುಖ್ಯವೋ, ಮಕ್ಕಳು ತಮ್ಮ ಪೋಷಕರ ಬಗ್ಗೆ ತಿಳಿದುಕೊಳ್ಳುವುದೂ ಅಷ್ಟೇ ಮುಖ್ಯ. ಮಕ್ಕಳ ಆಂದೋಳನ 6–8 ರಿಂದಲೇ ಆರಂಭವಾಗಬೇಕು. ಚರಿತ್ರೆ, ಪುರಾಣಗಳಲ್ಲಿ ಅವಲೋಕಿಸಿದಾಗ ಮಕ್ಕಳು ಅಟ್ಟಕ್ಕೇರಿರುವುದು 6 ರಿಂದ 8 ರಲ್ಲೇ. ಆರರಲ್ಲಿ ಅರಳದ ಮಗು ಅರವತ್ತರಲ್ಲಿ ಅರಳೀತೇ? ಯಾವುದು ಕೆಟ್ಟದ್ದು, ಯಾವುದು ಒಳ್ಳೆಯದು, ಯಾವುದು ಮಾಡಬೇಕು, ಯಾವುದು ಮಾಡಬಾರದು ಎಂಬ ಜಿಜ್ಞಾಸೆ, ಅರಿವು 6 ರಿಂದ 8 ರಲ್ಲೇ ಆರಂಭವಾಗಬೇಕು.

ಶಿಕ್ಷಣದಲ್ಲಿ ಮಕ್ಕಳ ಪ್ರಶ್ನೆ ಒಂದು ಕ್ರಾಂತಿಯಾಗಿ ಶಾಲಾ ಕಾಲೇಜುಗಳಲ್ಲಿ ಆರಂಭವಾಗಬೇಕು. ಈ ಪ್ರಶ್ನಾವಳಿ ಪ್ರಯೋಗ ಪಠ್ಯಕ್ರಮದಲ್ಲಿ ಕಡ್ಡಾಯವಾಗಿ ಇಡಬೇಕು. ಶಿಕ್ಷಕರು ಪಠ್ಯದ ಜೊತೆಗೆ ಈ ಪ್ರಶ್ನೆಗಳ ಮೂಲ ಉದ್ದೇಶಗಳನ್ನು ಮಕ್ಕಳಿಗೆ ತಿಳಿಸಬೇಕು. ಮನೆಯ ಅಭ್ಯಾಸ ಪಾಠ ಕ್ರಮವಾಗಿ, ಹೋಂ ವರ್ಕ್, ಹೋಮ್ ಅಸೈನ್‌ಮೆಂಟ್ ರೂಪದಲ್ಲಿ ಕೊಡಬೇಕು. ತಮ್ಮ ಪೋಷಕರಿಗೆ ಮಕ್ಕಳೇ ಕೇಳಿ ಉತ್ತರ ಪಡೆದು ತಂದುಕೊಡುವಂತೆ ಹೇಳಬೇಕು. ತಿಂಗಳಿಗೊಮ್ಮೆಯಾದರೂ ಮನೆಗೆ ಇಂತಹ ಪ್ರಶ್ನಾವಳಿ ಮಕ್ಕಳ ಮೂಲಕ ಕಳುಹಿಸಿಕೊಡಬೇಕು. ಬೇಕಿದ್ದರೆ ಶಿಕ್ಷಕರು ಮಕ್ಕಳ ಪೋಷಕರ ಉದ್ಯೋಗ, ವೃತ್ತಿ ಕೇಳಿ ಅದಕ್ಕೆ ತಕ್ಕಂತೆ ಸಮಾಜಕ್ಕೆ, ಸರ್ಕಾರಕ್ಕೆ ಉಪಯೋಗವಾಗುವಂತಹ ಇನ್ನೂ ಕೆಲವು ಪ್ರಶ್ನೆಗಳನ್ನು ಸೇರಿಸಿಕೊಳ್ಳಬಹುದು. ಪೋಷಕರೂ ಕೂಡ ಇಂತಹ ಪ್ರಶ್ನೆಗಳನ್ನು ಆರೋಗ್ಯಕರ ರೀತಿಯಲ್ಲಿ ಸ್ವೀಕರಿಸಬೇಕು.

ಪ್ರಶ್ನೆ ಮಾಡಲು ಮಕ್ಕಳು ಕಲಿತಾಗಲೇ ಅವರು ಮುಂದೆ ಸುಪ್ರಜೆಗಳಾಗಿ, ಸುಸಂಸ್ಕೃತರಾಗಿ, ಸಮಾಜ ಸುಧಾರಕರಾಗಿ ಬೆಳೆಯಲು ಅನುವಾದೀತು. ನಿಜ. ನಿಮ್ಮನ್ನು ಯಾರಾದರೂ 'ಮುಂದೆ ಏನಾಗಬಯಸುತ್ತೀರಿ?' ಎಂದು ಪ್ರಶ್ನಿಸಿದರೆ ನಿಮ್ಮಿಂದ ಬರುವ ಉತ್ತರ 'ಐ.ಎ.ಎಸ್ ಆಗುತ್ತೇನೆ, ಕೆ.ಎ.ಎಸ್ ಆಗುತ್ತೇನೆ, ಡಾಕ್ಟರ್ ಆಗುತ್ತೇನೆ, ಇಂಜಿನಿಯರ್ ಆಗುತ್ತೇನೆ...!' ಆದರೆ, 'ಏನಾದರೂ ಆಗಲಿ, ಉತ್ತಮ ಮಾನವನಾಗುತ್ತೇನೆ' ಎಂದು ಹೇಳುವುದಿಲ್ಲ ಏಕೆ? ಆ ಕಲ್ಪನೆ ಪೋಷಕರು ನಿಮ್ಮ ಮನಸ್ಸಿನಲ್ಲಿ ಮೂಡಿಸಲಿಲ್ಲ ಏಕೆ? ಆ ಸಂಸ್ಕಾರ ನಿಮ್ಮಲ್ಲಿ ಬೆಳಸಲಿಲ್ಲ ಏಕೆ? ಉತ್ತಮ, ಆರೋಗ್ಯಕರ, ಸುಸಂಸ್ಕೃತ ಸಮಾಜದ ಶಿಲ್ಪಿಗಳಾಗಿ ಬೆಳೆಯಲು ನೀವು ಬಯಸುವುದಿಲ್ಲವೇ? ಬಾಹ್ಯ ಪರಿಸರ ಸ್ವಚ್ಛ ಮಾಡಿದರಷ್ಟೇ ಸಾಲದು, ಪ್ರತಿಯೊಬ್ಬರ ಮೆದುಳು, ಒಡಲಿನ ಪರಿಸರವೂ ಸ್ವಚ್ಛ ಮಾಡಬೇಕು.

ಆರರಿಂದ ಇಪ್ಪತ್ತಾರರವರೆಗೆ ಎಲ್ಲಾ ಮಕ್ಕಳು ತಮ್ಮ ಪೋಷಕರನ್ನು ಪದೇ ಪದೇ ಪ್ರಶ್ನಿಸುತ್ತಿರಬೇಕು. ಪ್ರಶ್ನಿಸಿರಿ. ಪ್ರಶ್ನಿಸುವುದರ ಮೂಲಕ ಒಂದು ಅಡಿ ಮುಂದಿಡಿ.